# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಸದಸ್ಯರ ಹೆಸರು** | : | **ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ)** |
| **ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **638** |
| **ಉತ್ತರಿಸಬೇಕಾದ ದಿನಾಂಕ** | : | **20.02.2024** |
| **ಉತ್ತರಿಸಬೇಕಾದ ಸಚಿವರು** | : | **ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು.** |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಹೊಸದಾಗಿ ನಂದಿನಿ ಪಾರ್ಲರ್‌ಗಳ ಫ್ರಾಂಚೈಸಿಯನ್ನು ಪಡೆಯಲು ಇರುವ ನಿಯಮ ಹಾಗೂ ಮಾನದಂಡಗಳೇನು; | **<u>ನಂದಿನಿ ಹಾಲು ಮತ್ತು ಉತ್ಪನ್ನಗಳ ಮಾರಾಟಕ್ಕಾಗಿ ಪಾರ್ಲರ್‌ಗಳ ಸ್ಥಾಪನೆಯ ಮಾನದಂಡಗಳು</u>:**<br><br>ನಂದಿನಿ ಪಾರ್ಲರ್‌ಗಳನ್ನು ಸೂಕ್ತ ಮತ್ತು ಹೆಚ್ಚು ಜನದಟ್ಟಣೆ ಇರುವಂತಹ ಬಿಬಿಎಂಪಿ ಪಾರ್ಕ್, ಬಿಡಿಎ, ಸಿಎ ಸ್ಥಳಗಳಲ್ಲಿ, ಬಿಡಿಎ ಅಧೀನ ಸ್ಥಳಗಳಲ್ಲಿ, ಬಿಎಂಟಿಸಿ ಮತ್ತು ಕೆಎಸ್ ಆರ್‌ಟಿಸಿ ಬಸ್ ನಿಲ್ದಾಣಗಳು, ಶಾಲಾ-ಕಾಲೇಜು ಅವರಣಗಳು, ಸರ್ಕಾರಿ/ಅರೆ ಸರ್ಕಾರಿ ಸ್ಥಳಗಳು, ಆರೋಗ್ಯ ಕೇಂದ್ರ, ಐಟಿಬಿಟಿ ಸಂಸ್ಥೆಗಳು, ಬೃಹತ್ ಅಪಾರ್ಟ್‌ಮೆಂಟ್‌ಗಳ ಆವರಣಗಳು ಹಾಗೂ ಇತರೆ ಸೂಕ್ತ ಸ್ಥಳಗಳಲ್ಲಿ ಪ್ರಾರಂಭಿಸ ಬಹುದಾಗಿದೆ.<br><br>**<u>ಪಾರ್ಲರ್ ನಿರ್ವಹಣೆದಾರರ ಗುರುತಿಸುವಿಕೆ:</u>**<br><br>ಯಾವುದೇ ಮತ, ಪಂಗಡ ವಿದ್ಯಾರ್ಹತೆಗಳ ಬಗ್ಗೆ ತಾರತಮ್ಯ ಮಾಡದೇ ಕೇವಲ ವ್ಯಕ್ತಿಯ ಆಸಕ್ತಿ ಮೇರೆಗೆ ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಹಾಲು ಮಹಾಮಂಡಳ/ಒಕ್ಕೂಟದ ಕಾರ್ಯನಿರ್ವಾಹಕರ ಅನುಮೋದನೆಯಂತೆ ಪಾರ್ಲರ್ ಹಂಚಿಕೆ ಮಾಡಲಾಗುವುದು.<br><br>➢ ಪಾರ್ಲರ್ ಹೊಂದಲು ಬಯಸುವ ವ್ಯಕ್ತಿ (ಪುರುಷ/ಮಹಿಳೆ) ಡೇರಿ ವ್ಯವಹಾರದಲ್ಲಿ ಆಸಕ್ತಿ ಹೊಂದಿ ಸಂಪೂರ್ಣ 24/7 ಕಾರ್ಯನಿರ್ವಹಿಸುವಂತಿರಬೇಕು.<br><br>➢ ಪಾರ್ಲರ್ ಹೊಂದಲು ಬಯಸುವ ವ್ಯಕ್ತಿಯು ದೈನಂದಿನ ವಹಿವಾಟಿಗೆ ಹಣ ಹೂಡಿಕೆ ಮಾಡಲು ಶಕ್ತನಾಗಿರಬೇಕು.<br><br>➢ ಪಾರ್ಲರ್ ಹೊಂದಲು ಬಯಸುವ ವ್ಯಕ್ತಿಯು ಸ್ಥಳ ಗುರುತಿಸಿ ಸಂಬಂಧ ಪಟ್ಟ ಇಲಾಖೆ ಅಥವಾ ಸಂಸ್ಥೆಯಿಂದ ಸ್ಥಳ ಹಂಚಿಕೆ/ಮಂಜೂರಾತಿ ಪತ್ರವನ್ನು ಕಹಾಮಗೆ ಸಲ್ಲಿಸಿದ್ದಲ್ಲಿ. ಕಹಾಮದಿಂದ ಎನ್.ಓ.ಸಿ ನೀಡಿ ಸಂಬಂಧಪಟ್ಟ ಜಿಲ್ಲಾ ಹಾಲು ಒಕ್ಕೂಟಗಳಿಂದ ಹಾಲು ಮತ್ತು |

| | | |
|---|---|---|
| | | ಉತ್ಪನ್ನಗಳ ಮಾರಾಟದ ರೀಟೇಲ್‌ಗಾರಿಕೆ ಯನ್ನು ನೀಡಲಾಗುವುದು.<br><br>➢ ಸಾಮಾನ್ಯವಾಗಿ ನಂದಿನಿ ಪಾರ್ಲರನ್ನು ಪ್ರಾರಂಭಿಸಲು ಕನಿಷ್ಠ 8x10 ಅಡಿ 10x10 ಅಡಿ ಅಥವಾ 20x10 ಅಡಿ (ಲಭ್ಯವಿದ್ದಲ್ಲಿ) ಸ್ಥಳ ಅವಶ್ಯವಿರುತ್ತದೆ.<br><br>➢ ಹೊಸದಾಗಿ ಪ್ರಾರಂಭಿಸುವ ನಂದಿನಿ ಪಾರ್ಲರ್‌ಗಳಿಗೆ ಕಹಾಮ/ಒಕ್ಕೂಟದಿಂದ ಆಕರ್ಷಕವಾಗಿ ಏಕರೂಪ ಬ್ರ್ಯಾಂಡಿಂಗ್ ಮಾಡಿಸಿ ಕೊಡಲಾಗುವುದು, ಕೂಲರ್/ಡೀಫ್-ಪ್ರೀಜರ್‌ಗಳನ್ನು ಶೇಕಡ 50 ರಷ್ಟು ರಿಯಾಯಿತಿ ದರಗಳಲ್ಲಿ ಕಹಾಮ/ ಒಕ್ಕೂಟಗಳಿಂದ ಸರಬರಾಜು ಮಾಡಲಾಗುವುದು.<br><br>➢ ಉಳಿದ ಸಂಬಂಧಪಟ್ಟ ವ್ಯಕ್ತಿಯೇ ಪಾರ್ಲರ್ ನಿರ್ಮಾಣ, ಉತ್ಪನ್ನಗಳ ದಾಸ್ತಾನು ಮೊತ್ತ, ರೀಟೇಲ್‌ಗಾರಿಕೆ ಪಡೆಯಲು ಭದ್ರತಾ ಠೇವಣಿ (ಮರು ಪಾವತಿಸುವ ಮೊತ್ತ) ಭರಿಸಬೇಕಾಗಿರುತ್ತದೆ.<br><br>➢ ಸರ್ಕಾರಿ/ಅರೆ ಸರ್ಕಾರಿ ಸಂಸ್ಥೆ ಮತ್ತು ಇತರೆ ಸಂಸ್ಥೆಗಳಿಂದ ಹೊಸದಾಗಿ ಪಾರ್ಲರ್ ಸ್ಥಾಪನೆಗೆ ಸ್ಥಳ, ಬಾಡಿಗೆ ಹಾಗೂ ಅವಧಿಯನ್ನು ಜಂಟಿಯಾಗಿ ಕರಾರು ಒಪ್ಪಂದವನ್ನು ಮಾಡಲಾಗುವುದು.<br><br>➢ ಪಾರ್ಲರ್ ನಿರ್ವಹಣೆಗಾರಿಕೆಯನ್ನು ವ್ಯಕ್ತಿಗೆ 2 ವರ್ಷದ ಅವಧಿಗೆ ಕರಾರು ಒಪ್ಪಂದ ಮಾಡಲಾಗುವುದು ಹಾಗೂ ತದನಂತರ ಅವರುಗಳ ನಿರ್ವಹಣೆ ಉತ್ತಮವಾಗಿದಲ್ಲಿ ನಿರ್ವಹಣೆಗಾರಿಕೆಯ ಅವಧಿಯನ್ನು ವಿಸ್ತರಿಸಲಾಗುವುದು.<br><br>**ನಂದಿನಿ ಪಾರ್ಲರ್ ಸ್ಥಾಪನೆಯ ಉದ್ದೇಶಗಳು.**<br><br>ಸಕಾಲದಲ್ಲಿ ಗ್ರಾಹಕರಿಗೆ ಉತ್ತಮ ಗುಣಮಟ್ಟ ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಎಲ್ಲಾ ಶ್ರೇಣಿಗಳನ್ನು ಸ್ಪರ್ಧಾತ್ಮಕ ದರದಲ್ಲಿ ಲಭ್ಯ ಮಾಡುವುದರೊಂದಿಗೆ ನಂದಿನಿ ಉತ್ಪನ್ನಗಳ ವಹಿವಾಟನ್ನು ವಿಸ್ತರಣೆಗೆ ಅವಕಾಶ ಕಲ್ಪಿಸುವುದು.<br><br>➢ ಸದಾ ಕಾಲ ಗ್ರಾಹಕರಿಗೆ ಗುಣಮಟ್ಟದ ಉತ್ಪನ್ನಗಳು ಲಭ್ಯವಾಗುವಂತೆ ಮಾಡುವುದು.<br><br>➢ ನಿರುದ್ಯೋಗಿ ಮಹಿಳೆ/ಪುರುಷ/ವಿಕಲ ಚೇತನರು/ಹಿರಿಯ ನಾಗರಿಕರಿಗೆ ಉದ್ಯೋಗ ಕಲ್ಪಿಸುವುದು. |

| | | |
|---|---|---|
| | | ➢ ಪರಿವರ್ತನೆಯಾಗುವ ಹೆಚ್ಚುವರಿ ಹಾಲನ್ನು ದ್ರವ ರೂಪದಲ್ಲೇ ಮಾರಾಟಕ್ಕೆ ಕ್ರಮವಿಟ್ಟು ರೈತರಿಗೆ ಉತ್ತಮ ದರವನ್ನು ನೀಡುವುದು.<br>➢ ನಿರುದ್ಯೋಗಿ ಮಹಿಳೆ/ಪುರುಷ ಸ್ವಯಂ ಉದ್ಯೋಗ ಕಲ್ಪಿಸಿ ಆರ್ಥಿಕ ಸಧೃಡವಾಗುವಂತೆ ಮಾಡುವುದು ಧ್ಯೇಯವಾಗಿದೆ. |
| ಆ | ಒಂದು ನಂದಿನಿ ಬೂತ್ ನಿಂದ ಇನ್ನೊಂದು ನಂದಿನಿ ಬೂತ್‌ನ ನಡುವೆ ಇರಬೇಕಾದ ಅಂತರ ಎಷ್ಟು; | ನಂದಿನಿ ಬೂತ್ ತೆರೆಯಲು ಒಂದು ಬೂತ್‌ನಿಂದ ಇನ್ನೊಂದು ಬೂತ್‌ಗೆ ಅಂದಾಜು 500 ಮೀಟರ್ ಅಂತರದಂತೆ ಆಯಾ ಸ್ಥಳದ ಬೇಡಿಕೆ ಮತ್ತು ಜನಸಂಖ್ಯೆ ಆಧಾರದ ಮೇಲೆ ಬೂತ್ ಸ್ಥಾಪಿಸಲು ಕ್ರಮಕೈಗೊಳ್ಳಲಾಗುತ್ತಿರುತ್ತದೆ. |
| ಇ | ನಂದಿನಿ ಪಾರ್ಲರ್‌ಗಳಲ್ಲಿ ಯಾವ ಯಾವ ಉತ್ಪನ್ನಗಳನ್ನು ಮಾರಾಟ ಮಾಡಲಾಗುತ್ತಿದೆ; | ನಂದಿನಿಯ ಎಲ್ಲಾ ಶ್ರೇಣಿಯ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡಲಾಗುತ್ತಿರುತ್ತದೆ. |
| ಈ | ನಂದಿನಿ ಪಾರ್ಲರ್‌ಗಳಲ್ಲಿ ಮಾರಾಟ ಮಾಡುವ ಒಂದು ಕಪ್ ಕಾಫಿ ಒಂದು ಕಪ್ ಬಾದಾಮಿ ಹಾಲು ಮತ್ತು ಒಂದು ಗ್ಲಾಸ್ ತಂಪಾದ ಬಾದಾಮಿ ಹಾಲಿಗೆ ನಿಗಧಿಪಡಿಸಿರುವ ದರ ಎಷ್ಟು? | ಕರ್ನಾಟಕ ಹಾಲು ಮಹಾಮಂಡಳದ ವತಿಯಿಂದ ಯಾವುದೇ ರೀತಿಯಲ್ಲಿ ಕಾಫಿ ಮತ್ತು ಬಾದಾಮಿ ಹಾಲು ಮಾರಾಟಕ್ಕೆ ದರಗಳನ್ನು ನಿಗದಿಪಡಿಸಿರುವುದಿಲ್ಲ. ಆಯಾ ಸ್ಥಳದ ಸಾರ್ವಜನಿಕರ ಅನುಗುಣವಾಗಿ ಪಾರ್ಲರ್ ಕನ್ಸೇಷನರ್‌ದಾರರು ಮಾರಾಟ ದರಗಳನ್ನು ನಿಗದಿಪಡಿಸಿ ಮಾರಾಟ ಮಾಡುತ್ತಿರುತ್ತಾರೆ. |
| ಉ | ರಾಜ್ಯದ ಕೇಂದ್ರ ಬಸ್ ನಿಲ್ದಾಣಗಳಲ್ಲಿ ಒಂದಕ್ಕಿಂತ ಹೆಚ್ಚಿನ ನಂದಿನಿ ಬೂತ್ ನಂದಿನಿ ಪಾರ್ಲರ್‌ನ್ನು ಸ್ಥಾಪಿಸಲು ಅಥವಾ ಅನುಮತಿ ನೀಡಲು ಅವಕಾಶವಿದೆಯೇ? (ವಿವರವಾದ ಮಾಹಿತಿಯನ್ನು ನೀಡುವುದು) | ರಾಜ್ಯ ಹಾಗೂ ನಗರ ಪ್ರದೇಶಗಳ ಬಸ್ ನಿಲ್ದಾಣಗಳಲ್ಲಿ ಪಾರ್ಲರ್ ಹೊಂದಲು ಬಯಸುವ ವ್ಯಕ್ತಿಯು ಸ್ಥಳ ಗುರುತಿಸಿ ಸಂಬಂಧ ಪಟ್ಟ ಇಲಾಖೆ ಅಥವಾ ಸಂಸ್ಥೆಯಿಂದ ಸ್ಥಳ ಹಂಚಿಕೆ/ಮಂಜೂರಾತಿ ಪತ್ರವನ್ನು ಕಹಾಮಗೆ ಸಲ್ಲಿಸಿದ್ದಲ್ಲಿ ಈ ಬಗ್ಗೆ ಒಕ್ಕೂಟ/ಕಹಾಮದ ಮಾರುಕಟ್ಟೆ ಸಿಬ್ಬಂದಿಯಿಂದ ಪರಿಶೀಲಿಸಿ ಅಲ್ಲಿನ ಬೇಡಿಕೆ ಮತ್ತು ಜನಸಂದಣಿ ಅಧಾರದಲ್ಲಿ ಕಹಾಮದಿಂದ ಎನ್.ಓ.ಸಿ ನೀಡಿ ಸಂಬಂಧಪಟ್ಟ ಜಿಲ್ಲಾ ಹಾಲು ಒಕ್ಕೂಟಗಳಿಂದ/ಕಹಾಮ ಘಟಕಗಳಿಂದ ಹಾಲು ಮತ್ತು ಉತ್ಪನ್ನಗಳ ಮಾರಾಟಕ್ಕೆ ರೀಟೇಲ್‌ಗಾರಿಕೆಯನ್ನು ನೀಡಲಾಗುತ್ತಿರುತ್ತದೆ. |

**ಇ- ಪಸಂಮೀ 34 ಸಲೆವಿ 2024**

**(ಕೆ. ವೆಂಕಟೇಶ್)**
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**